ನರೇಗಲ್ ನಗರದ ಕುಡಿಯುವ ನೀರಿನ ಸರಬರಾಜಿನ ಬಗ್ಗೆ

ಶ್ರೀ(ಶ್ರೀಮತಿ) ಶ್ರೀ ಜ್ಞಾನದೇವ ದೊಡ್ಡ ಮೇಟಿ(ರೋಣ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೋಣ ತಾಲ್ಲೂಕಿನ ನರೇಗಲ್ ನಗರದ ಕುಡಿಯುವ ನೀರಿನ ಯೋಜನೆಯಿಂದ ಅಲ್ಲಿಯ ಜನತೆಗೆ ಸಾಕಾಗುವಷ್ಟು ನೀರು ನಗರದ ಎಲ್ಲಾ ಗಲ್ಲಿಗಳಿಗೆ ಸರಬರಾಜಾಗದೇ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ನರೇಗಲ್ ನಗರ ನೀರು ಸರಬರಾಜು ಯೋಜನೆ ಸುಧಾರಿಸಲು ಹೆಚ್ಚುವರಿ ಯೋಜನೆಯನ್ನು ಸರ್ಕಾರದವರು ಕೈಕೊಳ್ಳುವರೇ ?

ಇ) ಹಾಗಿದ್ದಲ್ಲಿ ಈ ಹೆಚ್ಚುವರಿ ಯೋಜನೆಯನ್ನು ಯಾವಾಗ ಕಾರ್ಯಗತ ಗೊಳಿಸಲಾಗುವುದು ?

ಪ್ರೊ. ಎ. ಲಕ್ಷ್ಮೀಸಾಗರ್ ನಗರಾಭಿವೃದ್ಧಿ ಸಚಿವರು.—

ಅ) ಬಂದಿದೆ

ಆ) ವಿತರಣಾ ವ್ಯವಸ್ಥೆಯನ್ನು ಸುಧಾರಿಸಲು ಯೋಜನೆಯೊಂದನ್ನು ತಯಾರಿಸಲಾಗಿದ್ದು ಅದರ ಅಂದಾಜು ವೆಚ್ಚ ಪಟ್ಟಿಯನ್ನು ತಯಾರಿಸಲಾಗುತ್ತಿದೆ.

ಇ) ಅಂದಾಜು ವೆಚ್ಚ ಪಟ್ಟಿ ಮತ್ತು ನಕ್ಷೆಗಳು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಬಂದ ನಂತರ ಆಡಳಿತಾತ್ಮಕ ಅನುಮೋದನೆಯನ್ನು ನೀಡುವುದನ್ನು ಪರಿಶೀಲಿಸಲಾಗುವುದು.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಇಡಲಾಗಿದೆ.

PAPERS LAID ON THE TABLE

SRI A. LAKSHMI SAGAR (Minister for Law and Parlimentary Affairs Food and Civil Supplies and Urban Development)
Sir, I beg to lay on behalf of the Chief Minister;

1. Order No. DPAR 157 GAM 82 dated 15/28-5-1985: Deputation of Sri K. Gangadhar, Ex-Minister of State for Information and Youth Service to Brisbane, Australia to witness 12th Commonwelth Sports and Games.

2. Notification No. FD 118 CEX 85 dated 23-6-1986 The Karnataka Entertainments Tax (Amendment) Rules 1986.

3. Notification No. FD 4 CSL 86 dated 20-6-1986. Reduction of tax payable by a dealer on the Television Sets and Components manufactured in Karnataka.

4. Notification No FD 52 CSL 86(I)dated 11-7-1986 Reduction of the tax payable on the goods sold to the Government undertaking.

5. Notification No FD 52 CSL 16(II)dated 11-7-1986; Cancellation of Notification No. FD 55 CSL 77 dated 8th/10th February 1978.